ಬಲ್ಬುಗಳು, ಇದ್ದಕ್ಕಿದ್ದಂತೆಯೇ ಕಾಣುತ್ತಿರುವ ಆಗಂತುಕರು ಎಲ್ಲದರಿಂದಲೂ ಆತಂಕಗೊಂಡಿದ್ದ ಗಂಗಕ್ಕ, 'ಈ ಶುಕ್ರವಾರ ಚೌಡಿಗೊಂದು ಕಾಯಿ ಒಡಿಯದೇಯ' ಎಂದು ತನ್ನನ್ನೂ ಚೌಡಮ್ಮನನ್ನೂ ಒಟ್ಟಿಗೆ ಸಮಾಧಾನಪಡಿಸಿದಳು. ಅದರಲ್ಲೂ ರಾತ್ರಿ ಎಚ್ಚರವಾದಾಗ ಹೊಸದಾಗಿ ಮಕ್ಕಳು ಅಳುವ ಧ್ವನಿ ಕೇಳಿದ ಮೇಲಂತೂ, ಕೆಳಗಿನ ಮನೆಯ ಭವಾನಿಗೂ ಚೌಡಿಪೂಜೆ ಮಾಡಿಸಲು ತಾಕೀತು ಮಾಡಬೇಕೆಂದು ಲೆಕ್ಕ ಹಾಕಿ ಮುಸುಕಿಕ್ಕಿದಳು.

ಮುಂಗಾರು ಆರಂಭವಾಗಲು ಇನ್ನೂ ಮೂರ್ನಾಲ್ಕು ವಾರಗಳಿದ್ದವು. ಒಂದು ಹನಿ ಮಳೆಯೂ ಇಲ್ಲದಂತಹ ಉರಿ ಬೇಸಿಗೆ ಈ ಬಾರಿ ಸಕ್ರೆಬೈಲಿನ ಪಾಲಿಗೆ. ಇದೇ ಸಮಯವನ್ನಾಶ್ರಯಿಸಿ ಸಕ್ರೆಬೈಲು ಪೇಟೆಯ ರಸ್ತೆ ಅಗಲೀಕರಣ ಕಾಮಗಾರಿ ಆರಂಭವಾಗಿತ್ತು. ಗಂಗಕ್ಕನ ಮನೆಯಂಗಳದಿಂದ ಕಾಲೆತ್ತರಿಸಿ ನೋಡಿದರೆ ಪೇಟೆಯಲ್ಲಿನ ರಸ್ತೆ ಕೆಲಸ ಸುಮಾರಾಗಿ ಗೋಚರಿಸುತ್ತಿತ್ತು. ಅದೇ ರಸ್ತೆಯಲ್ಲಿ ಮುಂದುವರೆದರೆ ಯಾಣದ ಮೇಲಾಸಿ ಘಟ್ಟ ಇಳಿದು ಕರಾವಳಿಯನ್ನು ತಲುಪಬಹುದಿತ್ತು. ಆ ರಸ್ತೆ, ಘಟ್ಟ ಇಳಿಯುವವರಿಗೆ ಶಾರ್ಟ್‌ಕಟ್ ಹೌದಾದರೂ ತೀರಾ ಕಿರಿದು. ಜೊತೆಗೆ ಅತ್ಯಂತ ಇಳಿಜಾರಿನ ದಾರಿ. ಹಾಗಾಗಿ ಆ ರಸ್ತೆಗೆ ಕಾಯಕಲ್ಪ ನೀಡದಿದ್ದರೆ ಹೆಚ್ಚು ಉಪಯೋಗಕ್ಕೆ ಬರುವಂಥದ್ದಾಗಿರಲಿಲ್ಲ. ಬಹುಶಃ ಅದಕ್ಕೇ ಇರಬೇಕು, ಈಗ ರಸ್ತೆಯನ್ನು ಅಗಲ ಮಾಡಲಾರಂಭಿಸಿದ್ದರು. ಗಂಗಕ್ಕನ ಮನೆ ಪಕ್ಕದ ಗುಡ್ಡೆಯ ಮೇಲೆ ಇದ್ದಕ್ಕಿದ್ದಂತೆ ಕಾಣಿಸಿಕೊಂಡ ಬಿಡಾರ ಇದೇ ರಸ್ತೆ ಕೆಲಸ ಮಾಡುವವರದ್ದು. ಮೂರ್ನಾಕು ದಿನಗಳ ಹಿಂದೆ ತಂಗಿಯ ಮನೆಗೆ ಹೋಗಿದ್ದ ಆಕೆ, ರಾತ್ರಿಯ ಬಸ್ಸಿಗೆ ಮರಳಿ ಬಂದಾಗ ರಸ್ತೆಯ ಕಾಮಗಾರಿ ಆಕೆಯ ಗಮನಕ್ಕೆ ಬಾರದೆ, ಆ ಕೆಲಸಗಾರರು ಹೂಡಿದ್ದ ಬಿಡಾರವಷ್ಟೇ ಕಂಡು ಕಂಗಾಲಾಗಿದ್ದಳು.

★★★

'ಯಾಣದ್ ಕಲ್ಲಿನ ತುದೀಗೆ ರಸ್ತೆ ಮಾಡ್ರೂ ಗಂಗಮ್ಮನ ಮನಿ ಮುಂದಿನ ರಸ್ತೆ ಆಗೂದೇ ಅಲ್ಲ ಹೇಳೀರಲ್ಲ ಊರ್ ಮ್ಯಾಲೆಲ್ಲ... ಈ ಸಾರಿ ಗಂಗಮ್ನ ಮನಿಮುಂದೂ ರಸ್ತೆ ಆಗೂದಂತೆ ಕಾಣಿ' ಎಂದು ಭವಿಷ್ಯ ನುಡಿಯುತ್ತಾ ದಾಪುಗಾಲಿಕ್ಕಿದಳು ದೇವಿ. ಆಕೆ ಗಂಗಕ್ಕನ ಮನೆ ಕೆಲಸ ಮಾಡಲು ತೊಡಗಿದ್ದು ಇತ್ತೀಚೆಗಾದರೂ ಬಹಳ ಹಿಂದಿನಿಂದಲೂ ಹೊಕ್ಕು ಹೊರಟು ಮಾಡುತ್ತಿದ್ದವಳು. 'ಆನು ಮದುವ್ಯಾಗಿ ಬಂದಾಗ್ಲೇ ದೇವಿಗೆ ಬಂದಿದ್ದ ಪ್ರಾಯ ಇನ್ನೂ ಹೋಜಿಲ್ಲೆ. ಎಷ್ಟು ವರ್ಷಾದ್ರೂ ಮುದುಕ್ಯೇ ಆಗ್ತಿಲ್ಲೆ' ಎಂದು ತನ್ನ ಸಮ ವಯಸ್ಕಳ ಬಗ್ಗೆ ಪ್ರಶಂಸೆಯೋ ಹೊಟ್ಟೆಕಿಚ್ಚೋ ಯಾವುದೆಂದು ತಿಳಿಯದ ಭಾವದಲ್ಲಿ ಗಂಗಕ್ಕನೇ ಆಚೀಚಿನವರಲ್ಲಿ ಹೇಳಿಕೊಂಡು ನಗುವುದಿತ್ತು. ಸುಳ್ಳೇನಲ್ಲ, ಬಿಡಿ. ದೇವಿ ಇದ್ದಿದ್ದೂ ಹಾಗೆಯೇ. ಹೇಗೆ ಲೆಕ್ಕ ಹಾಕಿದರೂ ಪ್ರಾಯ ಐವತ್ತು ಐವತ್ತೈದರ ಮೇಲಾಗಿದ್ದರೂ ಲೆಕ್ಕ ಹಾಕಿದವರೊಂದು ಬೇಕಲ್ಲ. ಹಾಗೆ ನೋಡಿದರೆ ಅದೊಂಥರಾ ಪರೋಪಕಾರಿ ಪ್ರಾಣಿ. 'ಉಪ್ಪಿನ ಕಾಯಿ ಮಿಡಿಯಾ? ಈ ಸಾರಿ ಹೊಳೆ ಸಾಲಿನ್ ಮರಕ್ಕೆ ಬರ್ದಂಡ್ ಕಾಯಿ ಬಂದದೆ. ಯಾರ್ ಕೂಡೆ ಬಡಿಸ್ಕತ್ರಿ ನೋಡಿ' ಎಂದೋ; 'ಚಕ್ಕಿ ಪಳಜ ಮಾಡೂಕೆ ಬೆಳೆದ್ ಕಾಯಿ ಬೇಕಂತಿದ್ರಲ್ಲ. ಇಗಳಿ... ಬೆಳೆದ್ ಹಲಸಿನ್ಕಾಯಿ. ಪಳಜ ಮಾಡ್ದಾಗ ನಂಗೂ ಹೇಳ್ರೊ' ಎನ್ನುತ್ತಲೋ; 'ಕೆಂಡದೊಲಿಗೆ ಇಂಗಾಳ ಬೇಕು ಹೇಳೀರಲ್ಲೇ ಅಮ್ಮ... ತಗಳಿ, ಮಳೆಗಾಲಿಷ್ಟಿಡೀ ಸಾಕು ನಿಮ್ಗೆ' ಎಂದಷ್ಟೇ ಅಲ್ಲ; 'ಡೇರೆ ಬುಡಕ್ಕೆ ಗೊಬ್ರ ಬೇಕಂದೀರಲ್ಲ, ನೋಡಿ... ಶಾಲೆ ರಸ್ತೆಲ್ಲಿ ಒಂದ್ ಬುಟ್ಟಿ ಶೆಗಣಿ ಬಿದ್ದಿತ್ತಾ... ಹೆಕ್ಕ ಬಂದೆ' ಎಂದೆಲ್ಲಾ ನಾನಾ ರೀತಿಯಲ್ಲಿ ಊರಿನ ಹೆಂಗಸರಿಗೆ ಬೇಕಾದವಳಾಗಿದ್ದಳು. ತಾನು ಅವರ ಮನೆಯಲ್ಲಿ ಕೆಲಸ ಮಾಡದಿದ್ದರೂ ಸರಿ, ಚಿಕ್ಕಪುಟ್ಟ ಕೈಂಕರ್ಯಗಳನ್ನು ಸಲ್ಲಿಸುತ್ತಾ ಅವರೆಲ್ಲಾ ಕೆಲವಷ್ಟು ಕೆಲಸಗಳಿಗೆ ತನ್ನನ್ನು